**3. ಸ್ವಯಂ ಸಿದ್ಧಗಳು, ಆಧಾರ ಪ್ರತಿಜ್ಞೆಗಳು ಮತ್ತು ಪ್ರಮೇಯಗಳು**

**ಇಲ್ಲಿನ ಕೆಲವು ಪ್ರಶ್ನೆಗಳು ಬಹು ಆಯ್ಕೆಯ ಪ್ರಶ್ನೆಗಳಾಗಿದ್ದು ಅವುಗಳಿಗೆ ಪುಸ್ತಕದಲ್ಲಿಯೇ ಉತ್ತರಗಳನ್ನು ನೀಡಲಾಗಿದೆ. ಮತ್ತೆ ಕೆಲವು ಪ್ರಶ್ನೆಗಳಿಗೆ ಪಠ್ಯಪುಸ್ತಕದಲ್ಲಿ ನೀಡಿರುವ ಉತ್ತರವನ್ನು ಗಮನಿಸಿ. ಅವುಗಳು ಸ್ವಯಂವೇದ್ಯವಾಗಿವೆ. ಹೀಗಾಗಿ ಅಂತಹವುಗಳನ್ನು ಇಲ್ಲಿ ಬಿಡಿಸಿಲ್ಲ.**

**ಹಿಂದಿನ ಅಭ್ಯಾಸಗಳಲ್ಲಿನ ಸಮಸ್ಯೆಗಳನ್ನು ಹೋಲದೇ ಇರುವಂತಹ ಮತ್ತು ಸ್ವಲ್ಪ ಕಷ್ಟ ಎನಿಸುವ ಹೊಸ ತೆರನಾದ ಸಮಸ್ಯೆಗಳು ಇದ್ದಲ್ಲಿ ಮಾತ್ರ ಇಲ್ಲಿ ಬಿಡಿಸಲಾಗಿದೆ.**

5. AB ಒಂದು ರೇಖಾಖಂಡವಾಗಿರಲಿ. C ಮತ್ತು D ಬಿಂದುಗಳು ಅದರ ಮಧ್ಯದಲ್ಲಿವೆ. ರೇಖಾಖಂಡದ ಮೇಲೆ ಬಿಂದುಗಳು A,C,D,B ಕ್ರಮದಲ್ಲಿದ್ದು, AD=BC ಆದಾಗ AC=DB ಎಂದು ಸಾಧಿಸಿ.

AD=BC(ದತ್ತ )

∴ AD-CD=BC-CD ⇒ AC=DB




6. AB ಮತ್ತು CD ಗಳು O ನಲ್ಲಿ ಛೇದಿಸಿದ ಎರಡು ಸರಳರೇಖೆಗಳಾಗಿವೆ. OX ಕಿರಣವು ∠ BOD ಯ ಕೋನಾರ್ಧಕವಾಗಿರಲಿ. OY⊥OX ಆಗುವಂತೆ OD ಮತ್ತು OA ಗಳ ನಡುವೆ OY ಯನ್ನು ಎಳೆಯಿರಿ. OY ಯು ∠ DOA ಯನ್ನು ಅರ್ಧಿಸುತ್ತದೆ ಎಂದು ಸಾಧಿಸಿ.

∠AOZ=∠BOX(∵ಶೃಂಗಾಭಿಮುಖ ಕೋನಗಳು ಸಮ )

∠BOX=∠DOX(∵OX ಕಿರಣವು ∠ BOD ಯ ಕೋನಾರ್ಧಕ )

∴∠AOZ=∠DOX

∠ZOY=∠YOX=$90^{O}$ (∵OY⊥OX )

∴∠ZOY-∠AOZ= ∠YOX-∠DOX

⇒∠AOY=∠YOD ⇒OY ಯು ∠ DOA ಯನ್ನು ಅರ್ಧಿಸುತ್ತದೆ




A Project of www.eShale.org

7. AB ಮತ್ತು CD ಗಳು ಎರಡು ಸಮಾಂತರ ಸರಳರೇಖೆಗಳಾಗಿರಲಿ. ಅವುಗಳ ಛೇದಕ PQ ಆಗಿರಲಿ. PQ ಯು AB ಯನ್ನು L ನಲ್ಲಿ ಛೇದಿಸಲಿ. $\angle$ ALP ಯ ಕೋನಾರ್ಧಕವು CD ಯನ್ನು R ನಲ್ಲಿಯೂ ಮತ್ತು $\angle$ PLB ಯ ಕೋನಾರ್ಧಕವು CD ಯನ್ನು S ನಲ್ಲಿಯೂ ಛೇದಿಸಿದಾಗ, $\angle LRS + \angle RSL = 90^{o}$ ಎಂದು ಸಾಧಿಸಿ.

$\angle ALP + \angle PLB = 180^{o}$

$2\angle ELP + 2\angle FLP = 90^{o}$ ($\because$ ER $\angle$ ALP ಯ ಕೋನಾರ್ಧಕ & FS $\angle$ PLB ಯ ಕೋನಾರ್ಧಕ)

$\therefore \angle ELP + \angle FLP = 90^{o}$

$\Rightarrow \angle ELF = 90^{o}$

$\angle SLR = \angle ELF$ ($\because$ ಶೃಂಗಾಭಿಮುಖ ಕೋನಗಳು ಸಮ )

$\therefore \angle SLR = 90^{o}$

ತ್ರಿಭುಜ SLR ನಲ್ಲಿ $\angle LRS + \angle RSL + \angle SLR = 180^{o}$

$\therefore \angle LRS + \angle RSL = 180^{o} - \angle SLR = 180^{o} - 90^{o} = 90^{o}$




8. ನೀಡಿರುವ ಚಿತ್ರದಲ್ಲಿ AB ಮತ್ತು CD ಗಳು ಎರಡು ಸಮಾಂತರ ಸರಳ ರೇಖೆಗಳಾಗಿವೆ. PQ ಮತ್ತು RS ಛೇದಕಗಳು AB ಯನ್ನು U ನಲ್ಲಿ ಛೇದಿಸಿವೆ. $\angle DWU = 110^{o}$ ಮತ್ತು $\angle CVP = 70^{o}$ ಆದರೆ $\angle QUS$ ನ ಅಳತೆ ಕಂಡುಹಿಡಿಯಿರಿ.

$\angle AUV = \angle CVP = 70^{o}$ ($\because$ ಅನುರೂಪ ಕೋನಗಳು ಸಮ )

$\angle QUB = \angle AUV = 70^{o}$ ($\because$ ಶೃಂಗಾಭಿಮುಖ ಕೋನಗಳು ಸಮ)

$\angle SUB = \angle DWU = 110^{o}$ ($\because$ ಅನುರೂಪ ಕೋನಗಳು ಸಮ )

$\therefore x = \angle QUS = \angle SUB - \angle QUB = 110^{o} - 70^{o} = 40^{o}$




A Project of www.eShale.org

9. ಕೆಳಗೆ ನೀಡಿರುವ ಸಮಯಗಳಲ್ಲಿ ಗಡಿಯಾರದ "ಗಂಟೆ ಮತ್ತು ನಿಮಿಷದ ಮುಳ್ಳುಗಳ" ನಡುವಿನ ಕೋನದ ಅಳತೆ ಎಷ್ಟು ? (i) 1. 40 ಗಂಟೆಗಳು (ii) 2.15 ಗಂಟೆಗಳು

| |
|---|
| ಗಂಟೆಯ ಮುಳ್ಳು ಪ್ರತೀ 12 ಗಂಟೆಗೆ $360^{O}$ ಚಲಿಸುವುದರಿಂದ ಗಂಟೆಗೆ ಅದು $30^{O}$ ಚಲಿಸುತ್ತದೆ. ಅದು h ಗಂಟೆ ಮತ್ತು m ನಿಮಿಷಗಳಿಗೆ ಚಲಿಸುವ ಪ್ರಮಾಣ $=(h+\frac{m}{60})*30$<br>ನಿಮಿಷದ ಮುಳ್ಳು ಪ್ರತೀ 60 ನಿಮಿಷ $360^{O}$ ಚಲಿಸುವುದರಿಂದ ನಿಮಿಷಕ್ಕೆ ಅದು ಅದು $6^{O}$ ಚಲಿಸುತ್ತದೆ. ಅದು m ನಿಮಿಷಗಳಿಗೆ ಚಲಿಸುವ ಪ್ರಮಾಣ =6m ಡಿಗ್ರೀಗಳು |

| | |
|---|---|
| 1. 40 ಗಂಟೆಗಳು | ಗಂಟೆಯ ಮುಳ್ಳು ಚಲಿಸಿದ ದೂರ $=(h+\frac{m}{60})*30=(1+\frac{40}{60})*30=\frac{100}{2}=50^{O}$<br>ನಿಮಿಷದ ಮುಳ್ಳು ಚಲಿಸಿದ ದೂರ $=6m=6*40=240^{O}$<br>ಗಂಟೆ ಮತ್ತು ನಿಮಿಷದ ಮುಳ್ಳುಗಳ ನಡುವಿನ ಅಂತರ $=240^{O}-50^{O}=190^{O}$ |
| 2.15 ಗಂಟೆಗಳು | ಗಂಟೆಯ ಮುಳ್ಳು ಚಲಿಸಿದ ದೂರ $=(h+\frac{m}{60})*30=(2+\frac{15}{60})*30=\frac{135}{2}=67.5^{O}$<br>ನಿಮಿಷದ ಮುಳ್ಳು ಚಲಿಸಿದ ದೂರ $=6m=6*15=90^{O}$<br>ಗಂಟೆ ಮತ್ತು ನಿಮಿಷದ ಮುಳ್ಳುಗಳ ನಡುವಿನ ಅಂತರ $=90^{O}-67.5^{O}=22.5^{O}=22^{O}30'$ |

10. ಸಮಯವು ಸಂಜೆ 4.24 ಗಂಟೆಯಾದಾಗ ಗಡಿಯಾರದ ಗಂಟೆಯ ಮುಳ್ಳು ಸರಿಯಾಗಿ ಮಧ್ಯಾಹ್ನ 12 ಗಂಟೆಯ ಸ್ಥಾನದಿಂದ ಮುಂದಕ್ಕೆ ಎಷ್ಟು ಚಲಿಸಿರುತ್ತದೆ ?

| |
|---|
| 4.24 ಗಂಟೆಯಾದಾಗ ಗಡಿಯಾರದ ಗಂಟೆಯ ಮುಳ್ಳು ಚಲಿಸಿದ ದೂರ $=(h+\frac{m}{60})*30=(4+\frac{24}{60})*30=4.4*30=132^{O}$ |

11. AB ಯು ಒಂದು ರೇಖಾಖಂಡವಾಗಿರಲಿ. C ಯು ಅದರ ಮಧ್ಯಬಿಂದುವಾಗಿರಲಿ. B ಯು A ಮತ್ತು D ಗಳ ನಡುವೆ ಬರುವಂತೆ AB ಯನ್ನು D ವರೆಗೆ ವೃದ್ಧಿಸಿ. ಆಗ AB+BD = 2CD ಎಂದು ಸಾಧಿಸಿ.

| | |
|---|---|
| L.H.S.=AD+BD= (AC+CB+BD)+BD=CB+CB+BD+BD ($\because$ AC=CB )<br>= 2(CB+BD)= 2CD=R.H.S. |  |



A Project of www. nale.org

12. AB ಮತ್ತು CD ಗಳು O ಬಿಂದುವಿನಲ್ಲಿ ಛೇದಿಸಿದ ಎರಡು ಸರಳರೇಖೆಗಳಾಗಿವೆ. OX ಕಿರಣವು $\angle BOD$ ಯನ್ನು ಅರ್ಧಿಸಿದ ರೇಖೆಯಾಗಿರಲಿ. O ನ ಎಡಭಾಗಕ್ಕೆ ವೃದ್ಧಿಸಿದ OX ಕಿರಣವು $\angle AOC$ ಯನ್ನು ಅರ್ಧಿಸುತ್ತದೆ ಎಂದು ಸಾಧಿಸಿ.

$\angle DOX = \angle BOX$ ($\because$ OX $\angle BOD$ ಯ ಕೋನಾರ್ಧಕ )

$\angle DOX = \angle COY$ ($\because$ ಶೃಂಗಾಭಿಮುಖ ಕೋನಗಳು ಸಮ)

$\angle BOX = \angle AOY$ ($\because$ ಶೃಂಗಾಭಿಮುಖ ಕೋನಗಳು ಸಮ)

$\therefore \ \angle COY = \angle AOY \Rightarrow$ XOY ಕಿರಣವು $\angle AOC$ ಯನ್ನು ಅರ್ಧಿಸುತ್ತದೆ




13. OX ಒಂದು ಕಿರಣವಾಗಿರಲಿ. OA ಯು OX ಮತ್ತು OB ಗಳ ನಡುವೆ ಇರುವಂತೆ OA ಮತ್ತು OB ಗಳು OX ನ ಒಂದೇ ಪಾರ್ಶ್ವದಲ್ಲಿರುವ ಎರಡು ಕಿರಣಗಳಾಗಿರಲಿ. ಕಿರಣ OC ಯು $\angle AOB$ ಯ ಕೋನಾರ್ಧಕವಾದಾಗ, $\angle XOA + \angle XOB = 2\angle XOC$ ಎಂದು ಸಾಧಿಸಿ.

$\angle XOA + \angle XOB = \angle XOA + (\angle XOA + AOC + COB)$

$= 2\angle XOA + \angle AOC + \angle AOC$ ($\because$ OC $\angle AOB$ ಯ ಕೋನಾರ್ಧಕ )

$= 2\angle XOA + 2\angle AOC = 2\angle XOC$




14. OA ಮತ್ತು OB ಗಳು ಎರಡು ಕಿರಣಗಳಾಗಿರಲಿ. $\angle AOX > \angle XOB$ ಆಗಿರುವಂತೆ OX ಕಿರಣವು OA ಮತ್ತು OB ಕಿರಣಗಳ ನಡುವೆ ಇರಲಿ. OC ಯು $\angle AOB$ ಯ ಕೋನಾರ್ಧಕವಾದಾಗ $\angle AOX - \angle XOB = 2\angle COX$ ಎಂದು ಸಾಧಿಸಿ.

$\angle AOX - \angle XOB = (\angle AOC + \angle COX) - (\angle COB - \angle COX)$

$= \angle AOC - \angle COB + 2\angle COX$

$= \angle COB - \angle COB + 2\angle COX$ ($\because$ OC $\angle AOB$ ಯ ಕೋನಾರ್ಧಕ )

$= 2\angle COX$




A Project of www.eShale.org

15. OC ಯು OA ಮತ್ತು OB ಗಳ ನಡುವೆ ಇರುವಂತೆ OA, OB ಮತ್ತು OC ಗಳು ಮೂರು ಕಿರಣಗಳಾಗಿರಲಿ. $\angle AOC$ ಮತ್ತು $\angle COB$ ಗಳ ಕೋನಾರ್ಧಕಗಳು ಪರಸ್ಪರ ಲಂಬವಾಗಿದ್ದಾಗ B,O,A ಗಳು ಏಕರೇಖಾಗತವಾಗಿರುತ್ತವೆ ಎಂದು ಸಾಧಿಸಿ.

$\angle XOC+\angle YOC=90^{O}$(ದತ್ತ )

$\therefore 2\angle XOC+2\angle YOC=180^{O}$

$\Rightarrow \angle AOC+\angle COB=180^{O}$

$\therefore \angle AOB=180^{O} \Rightarrow$ A,O,B ಗಳು ಏಕರೇಖಾಗತವಾಗಿವೆ




16. ಕೊಟ್ಟಿರುವ ಚಿತ್ರದಲ್ಲಿ AB||DE ಆದರೆ, $\angle ABC - \angle DCB + \angle CDE = 180^{o}$ ಎಂದು ಸಾಧಿಸಿ.

ರಚನೆ: PQ||AB ಎಳೆಯಿರಿ

$\angle ABC+\angle BCP=180^{o}$(ಒಂದೇ ಪಾರ್ಶ್ವದಲ್ಲಿನ ಒಳಕೋನಗಳ ಮೊತ್ತ ) -----(1)

$\angle CDE+\angle DCQ=180^{o}$(ಒಂದೇ ಪಾರ್ಶ್ವದಲ್ಲಿನ ಒಳಕೋನಗಳ ಮೊತ್ತ )-----(2)

$(\angle BCP+\angle DCB+\angle DCQ)= 180^{o}$

$(1)+(2) \Rightarrow \angle ABC+\angle BCP+\angle CDE+\angle DCQ=180^{o}+180^{o}=180^{o}+(\angle BCP+\angle DCB+\angle DCQ)$

$\therefore \angle ABC+\angle BCP+\angle CDE+\angle DCQ=180^{o}+(\angle BCP+\angle DCB+\angle DCQ)$

$\Rightarrow \angle ABC + \angle CDE - \angle DCB = 180^{o}$




17. ಎರಡು ಸಮಾಂತರ ಸರಳರೇಖೆಗಳು ಹಾಗೂ ಒಂದು ಛೇದಕವನ್ನು ಪರಿಗಣಿಸಿದಾಗ ರೂಪುಗೊಳ್ಳುವ 8 ಕೋನಗಳ ಅಳತೆಗಳಲ್ಲಿ ಎಷ್ಟು ವಿಭಿನ್ನ ಸಂಖ್ಯೆಗಳಿವೆ

1 ---→ $\angle 1=\angle 4=\angle 6=\angle 7$

2 ---→ $\angle 2=\angle 3=\angle 5=\angle 8$

8 ಕೋನಗಳ ಅಳತೆಗಳಲ್ಲಿ ಕೇವಲ 2 ವಿಭಿನ್ನ ಸಂಖ್ಯೆಗಳಿವೆ




A Project of www.eShale.org